146ನೇ ಅಧಿವೇಶನ
ಕ್ರ-52
ನಿ-72
ಕಂಪ್ಯೂಟರ್

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಡಾ ವೈ.ಎ.ನಾರಾಯಣಸ್ವಾಮಿ ಇವರು ನಿಯಮ 72 ರ ಅಡಿಯಲ್ಲಿ ಪ್ರಸ್ತಾಪಿಸಿರುವ ಸೂಚನಾ ಪತ್ರಕ್ಕೆ ಹೇಳಿಕೆ.**

**ಸೂಚನೆ:-**

ಹೆಬ್ಬಾಳ ಮೇಲ್ಸೇತುವೆಯಲ್ಲಿ ಪ್ರತಿ ದಿನ ಟ್ರಾಫಿಕ್ ಜಾಮ್‌ನಿಂದಾಗಿ ವಾಹನ ಸವಾರರು ಕಿರಿಕಿರಿ ಅನುಭವಿಸುತ್ತಿದ್ದು ಇದನ್ನು ತಪ್ಪಿಸಲು ಸದರಿ ಮೇಲ್ಸೇತುವೆಯ ಪೂರ್ವ ಭಾಗದಲ್ಲಿ ಇನ್ನೊಂದು ವಿಂಗ್ ನಿರ್ಮಾಣ ಮಾಡುವ ಬಗ್ಗೆ.

**ಉತ್ತರ :-**

ಟ್ರಾಫಿಕ್ ಜಾಮ್ ಅನ್ನು ಪರಿಹರಿಸಲು ಹೊರವರ್ತುಲ ರಸ್ತೆಯ ಹೆಬ್ಬಾಳ ಜಂಕ್ಷನ್‌ನಲ್ಲಿ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣದ ಕಡೆಯಿಂದ ಬೆಂಗಳೂರು ನಗರದ ಕಡೆಗೆ ಸಂಚರಿಸುವ ವಾಹನಗಳಿಗೆ ಹೆಚ್ಚುವರಿ ಮೇಲುಸೇತುವೆ ನಿರ್ಮಾಣ ಹಾಗೂ ಹೊರವರ್ತುಲ ರಸ್ತೆಯ, ಹೆಬ್ಬಾಳ ಜಂಕ್ಷನ್‌ನಲ್ಲಿ ತುಮಕೂರು ರಸ್ತೆ ಕಡೆಯಿಂದ ಕೆ.ಆರ್ ಪುರಂ ಕಡೆಗೆ ಸಂಚರಿಸುವ ವಾಹನಗಳಿಗೆ ಏಕಮುಖ ಕೆಳಸೇತುವೆ ನಿರ್ಮಾಣ ಕಾಮಗಾರಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಟೆಂಡರ್ ಮುಖಾಂತರ ಮೆ॥ ಪಿ.ಸಿ.ಬಿ ಇಂಜಿನಿಯರ್ಸ್ ಪ್ರೈ.ಲಿ. ರವರಿಗೆ ದಿನಾಂಕ:06/01/2016 ರಲ್ಲಿ ರೂ.87.01 ಕೋಟಿಗಳಿಗೆ ವಹಿಸಲಾಗಿದ್ದು, ಇಲ್ಲಿಯವರೆಗೂ ರೂ. 24.49 ಕೋಟಿ ರಷ್ಟು ಪ್ರಗತಿ ಸಾಧಿಸಲಾಗಿರುತ್ತದೆ.

ಕೆ.ಆರ್.ಪುರಂ ಕಡೆಯಿಂದ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಕಡೆಗೆ ಮೆಟ್ರೋ ರೈಲು ನಿರ್ಮಿಸಲು ಯೋಜಿಸಲಾಗಿದ್ದು, ಸದರಿ ಯೋಜನೆಯ ಪಂಕ್ತೀಕರಣ ಹೆಬ್ಬಾಳ ಜಂಕ್ಷನ್ ಮೂಲಕ ಹಾದುಹೋಗುತ್ತಿದ್ದು, ಮೆಟ್ರೋ ರೈಲು ಯೋಜನೆಯನ್ನು ನಿರ್ಮಿಸಲು ಉದ್ದೇಶಿಸಿರುವುದರಿಂದ ಹೆಬ್ಬಾಳ ಜಂಕ್ಷನ್ ಮೇಲುಸೇತುವೆ ವಿಸ್ತರಿಸುವ ಕಾಮಗಾರಿಯನ್ನು ಮೆಟ್ರೋ ಯೋಜನೆಯೊಂದಿಗೆ ಸಂಯೋಜನೆಗೊಳಿಸಿ ಸಮಗ್ರವಾಗಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವುದರಿಂದ ಯೋಜನೆಯನ್ನು BMRCL ಪತ್ರ ಸಂಖ್ಯೆ: BMRCL/ED-3/AP-Line/2019-20 Dated: 10.08.2019 ರ ಪತ್ರದನ್ವಯ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಸದರಿ ಜಂಕ್ಷನ್‌ನಲ್ಲಿ ಸಂಯೋಜನೆಗೊಳಿಸುವ ಯೋಜನೆ ಅನುಮೋದನೆಗೊಂಡ ನಂತರ ಕಾಮಗಾರಿ ಪ್ರಾರಂಭಿಸಿ, ಪೂರ್ಣಗೊಳಿಸಲಾಗುವುದು.

**ಸಂಖ್ಯೆ: ನಅಇ 52 ಬೆಂಭೂಸ್ವಾ 2022**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ.